ಮಾಡುವ ಯಾವುದೇ ಪ್ರಸ್ತಾವನೆ ಲೋಕೋಪಯೋಗಿ ಇಲಾಖೆಯ ಮುಂದಿರುವುದಿಲ್ಲ.

ಇ) ಉಪ ಪ್ರಶ್ನೆ (ಆ)ರಲ್ಲಿನ ಉತ್ತರದಿಂದಾಗಿ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ)ಯವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 636ಕ್ಕೆ ಪೂರಕ ಟಿಪ್ಪಣಿ

ಬೆಳ್ತಂಗಡಿ ನಗರ ಪ್ರದೇಶದಲ್ಲಿರುವ ರಸ್ತೆಗಳು ಬೆಳ್ತಂಗಡಿ ನಗರಸಭಾ ವ್ಯಾಪ್ತಿಗೆ ಬರುವುದಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಗುರುವಾಯನಕೆರೆಯಿಂದ ಬೆಳ್ತಂಗಡಿ ಪೇಟೆಯ ಸೇತುವೆ ರಸ್ತೆಯು ಕಡೂರು–ಕಾಂಇಂಗಾಡ್ ರಾಜ್ಯ ಹೆದ್ದಾರಿ (ನಂ. 64) ರಸ್ತೆಯಾಗಿದ್ದು, ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. ಈ ರಸ್ತೆಯ ಕಿಮೀ. 129.80 ರಿಂದ 133.60 ವರೆಗಿನ ಕ್ಯಾರೇಜ್‌ವೇ ಅಗಲವು 7.50 ಕಿಮೀ. ಇದ್ದು ಉಳಿದಂತೆ ಗುರುವಾಯನಕೆರೆ ಪೇಟೆ ಭಾಗ, ಮಸೀದಿ ಹತ್ತಿರ ಹಾಗೂ ಬೆಳ್ತಂಗಡ್ಡಿ ಸೇತುವೆಯ ಕೂಡು ರಸ್ತೆ ಭಾಗದಲ್ಲಿ 5.50 ಮೀ. ಅಗಲ ವಿರುತ್ತದೆ. ಈ ರಸ್ತೆಯನ್ನು ಕಿಮೀ. 124.80 ರಿಂದ 135.00 ವರೆಗೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ವತಿಯಿಂದ ನಿರ್ವಹಣೆ ಕಾಮಗಾರಿಯನ್ನು ಕೈಗೊಂಡು ವಾಹನ ಸಂಚಾರಕ್ಕೆ ಸುಸ್ಥಿತಿಯಲ್ಲಿಡಲಾಗಿದೆ. ಸದರಿ ರಸ್ತೆಯು ನಗರಸಭಾ ವ್ಯಾಪ್ತಿಯಲ್ಲಿ ಬರುವುದರಿಂದ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದಾಗಲೀ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದಾಗಲೀ ಕಾಂಕ್ರೀಟೀಕರಣಗೊಳಿಸಿ ದ್ವಿಮುಖ ರಸ್ತೆಯನ್ನಾಗಿ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ಇರುವುದಿಲ್ಲ. ಕಡೂರು ಬಂಟ್ವಾಳ ರಸ್ತೆಯನ್ನು ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯ ಯೋಜನೆಯ ಅಡಿಯಲ್ಲಿ ಜೂನ್ 2001ರಲ್ಲಿ ನಿರ್ವಹಣೆ ಪ್ರಾರಂಭಿಸಿ ಜೂನ್ 2004ರಲ್ಲಿ ಮುಕ್ತಾಯಗೊಳಿಸಲಾಗಿದೆ.

8 (29) : ಶ್ರೀ ಆರ್. ಆಶೋಕ್ (ಉತ್ತರಹಳ್ಳಿ) ಶ್ರೀ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರತಿ ವರ್ಷ ಬಡತನ ರೇಖೆಯ ಕೆಳಗಿರುವ ಮಹಿಳೆಯರಿಗೆ ಉಚಿತ ಸೀರೆ ಮತ್ತು ಉಚಿತ ಬೆಡ್‌ಶೀಟ್ ನೀಡಲು ಸರ್ಕಾರ ತೀರ್ಮಾನಿಸಿದೆಯೇ;

ಆ) ಈ ಯೋಜನೆ ಎಂದಿನಿಂದ ಜಾರಿಗೆ ಬರಲಿದೆ?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

ಅ) ಇಲ್ಲ

ಆ) ಅನ್ವಯಿಸುವುದಿಲ್ಲ.

412(509) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆಯು 2004ರ ವರೆಗೆ ಹೊಂದಿರತಕ್ಕಂತಹ ಒಟ್ಟು ಸಾಲ ಮತ್ತು ಬಡ್ಡಿ ಎಷ್ಟು;

ಆ) 2004ರವರೆಗೆ ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟ್ ಮತ್ತು ಇಂದಿರಾ ವಿಕಾಸ ಪತ್ರಗಳು ಎರಡು ಬಾರಿ ಇಮ್ಮಡಿಯಾಗಿದ್ದು ಇದರ ಮೊತ್ತ ಎಷ್ಟು; ಈ ಹಣವನ್ನು ರೈತ ಸದಸ್ಯರಿಗೆ ಕೂಡಲ ಹಂಚುವಂತೆ ಕ್ರಮ ಕೈಗೊಳ್ಳಲಾಗುವುದೇ;

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಯವರು)

ಅ) ಕಾರ್ಖಾನೆ ಜುಲೈ 2004ರವರೆಗೆ ಒಟ್ಟು ಕೊಡತಕ್ಕ ಸಾಲ ಹಾಗೂ ಬಡ್ಡಿ ವಿವರ ಈ ಕೆಳಕಂಡಂತೆ ಇರುತ್ತದೆ.

1. ಸಕ್ಕರೆ ದಾಸ್ತಾನಿನ ಮೇಲೆ ಸಕ್ಕರೆ ಅಡುವಿನ ಸಾಲರೂ. 78.00 ಕೋಟಿ
2. ಸ್ಕೋರ್ ಮೆಟೀರಿಯಲ್ ಮೇಲೆ ಅಡುವಿನ ಸಾಲರೂ. 00.28 ಕೋಟಿ
3. ಸ್ಪಿರಿಟ್ ದಾಸ್ತಾನಿನ ಮೇಲೆ ಅಡುವಿನ ಸಾಲರೂ. 1.46 ಕೋಟಿ
4. 2004–05ನೇ ಪೂರ್ವ ಹಂಗಾಮಿನ ಸಾಲ ರೂ. 00.96 ಕೋಟಿ
5. ಟ್ರಕ್, ಡಂಪರ್ ಹಾಗೂ 1 ಟ್ರಾಕ್ಟರ್ ಟ್ರಾಲಿ ವಾಹನಗಳ ಅಡುವಿನ ಸಾಲ ರೂ. 00.13 ಕೋಟಿ

2002–03ನೇ ಅರ್ಥಿಕ ವರ್ಷದಲ್ಲಿ ದೇಶಿ ಸಕ್ಕರೆ ಮಾರುಕಟ್ಟೆ ಕುಸಿದ ಕಾರಣ ದುಡಿಯುವ ಬಂಡವಾಳ ಸಾಲ ಖಾತೆಗೆ ಉಂಟಾದ ಶಾಟೀ ಮಾರ್ಜೀನ್‌ನ ಮಧ್ಯಮಾವಧಿ ಸಾಲಬಾಕಿರೂ. 22.76 ಕೋಟಿ

ಒಟ್ಟು ಬಾಕಿ 103.59 ಕೋಟಿ

ಆ) 2004ರವರೆಗೆ ಇಂದಿರಾ ವಿಕಾಸ್ ಪತ್ರ ಹಾಗೂ ಕಿಸಾನ್ ವಿಕಾಸ್ ಪತ್ರಗಳು ಒಮ್ಮೆ ಮಾತ್ರ ಇಮ್ಮಡಿಯಾಗಿದ್ದು ಒಟ್ಟು ಕೊಡತಕ್ಕ ಹಣ 1099 ಕೋಟಿ ರೂ. ಆಗಿರುತ್ತದೆ. ಕಾರ್ಖಾನೆಯ ಆರ್ಥಿಕ ಸ್ಥಿತಿ ಸುಧಾರಿಸಿದ ಮೇಲೆ ಹಂತ ಹಂತವಾಗಿ ಆದ್ಯತೆ ಮೇರೆಗೆ ಪಾವತಿ ಮಾಡಲಾಗುತ್ತದೆ. ನ್ಯಾಷನಲ್ ಸೇವಿಂಗ್ ಸರ್ಟಿಫಿಕೇಟಗಳನ್ನು ರೈತರಿಗೆ ಹಂಚಿದ್ದ ಪ್ರಯುಕ್ತ ಹಿಂದಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

454(623) : ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳು ಪ್ರವೇಶ ನೀಡಿಕೆಯಲ್ಲಿ ರೋಸ್ಟರ್ ಪದ್ಧತಿ ಅನುಸರಿಸದಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರೋಸ್ಟರ್ ಪದ್ಧತಿ ಅನುಸರಿಸದಿರುವ ಶಿಕ್ಷಣ ಸಂಸ್ಥೆಗಳು ಯಾವುವು ಹಾಗೂ ಅಂತಹ ಶಿಕ್ಷಣ ಸಂಸ್ಥೆಗಳ ವಿರುದ್ಧ ಕೈಗೊಂಡಿರುವ ಕ್ರಮಗಳೇನು;

ಇ) ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ನೀಡುತ್ತಿರುವ ಅನುದಾನದ ಮೊತ್ತ ಎಷ್ಟು (ಶಿಕ್ಷಣ ಸಂಸ್ಥೆವಾರು ಮಾಹಿತಿ ನೀಡುವುದು);

ಈ) ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಅನುದಾನದ ವ್ಯಾಪ್ತಿಗೆ ತರುವಾಗ ವಿಧಿಸುವ ಷರತ್ತುಗಳೇನು;